ಗ್ರಂಥಾಲಯಗಳು ಅರಿವಿನ ಮನೆಯೂ ಹೌದು. ಗ್ರಾಮೀಣ ಭಾಗದ ಮಕ್ಕಳ ಮನೋವಿಕಾಸದ ತಾಣವಾಗಬೇಕಾದ ಗ್ರಂಥಾಲಯಗಳನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ನಾವು ಎಡವುತ್ತಿದ್ದೇವೆ. ಇಂತಹ ನಡೆಯನ್ನು ತಳಹಂತದಿಂದಲೇ ತಿದ್ದಲು ಮಂಡೆಕೋಲು ಗ್ರಾಮ ಪಂಚಾಯಿತಿಯಲ್ಲಿ ಹೊಸ ಸ್ವರೂಪದ 'ಅರಿವು ಕೇಂದ್ರ' ಶುರುವಾಗಿದೆ. ಈ ಅರಿವಿನ ಹರಿವು ಈಗ ರಾಜ್ಯವ್ಯಾಪಿ ವಿಸ್ತರಣೆಯಾಗಿದೆ.

■ ಗಣೇಶ ಚಂದನಶಿವ



ಕಬ್ಬನ್‌ಪಾರ್ಕ್‌ನಲ್ಲಿರುವ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಅಧ್ಯಯನನಿರತ ಅಭ್ಯರ್ಥಿಗಳು
ಚಿತ್ರ: ಎಂ.ಎಸ್. ಮಂಜುನಾಥ್

ಈ ಊರಲ್ಲಿ ಶಾಲೆಯಿಂದ ಬರುವ ಮಕ್ಕಳು ಮೊಬೈಲ್‌ಗೆ ಅಂಟಿಕೊಂಡು ಕೂರಲ್ಲ. ರಜಾ ದಿನ ಕಾಲಹರಣ ಮಾಡಲ್ಲ. ಅವರೆಲ್ಲ ತಮ್ಮ ಅಚ್ಚುಮೆಚ್ಚಿನ 'ಅರಿವು ಕೇಂದ್ರ'ಕ್ಕೆ ದೌಡಾಯಿಸುತ್ತಾರೆ. ಈ ಊರಿನ ಮಕ್ಕಳು ಅಷ್ಟೇ ಅಲ್ಲ, ತಾಯಂದಿರಿಗೂ ಇದು ನೆಚ್ಚಿನ ತಾಣ.

ಮಂಡೆಕೋಲು ಗ್ರಾಮ ಪಂಚಾಯಿತಿ ಗ್ರಂಥಾಲಯದ ಅರಿವು ಕೇಂದ್ರ ಇಡೀ ಊರಿಗೆ ಹೊಸ ದಿಕ್ಕು ತೋರಿದೆ. ಇಲ್ಲಿ ಆರಂಭವಾದ ಅರಿವಿನ ಹರಿವು ರಾಜ್ಯವ್ಯಾಪಿ ವಿಸ್ತರಣೆಯಾಗಿದೆ.



ಮಂಡೆಕೋಲು ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಮಕ್ಕಳು
ಚಿತ್ರ: ಲೋಕೇಶ್ ಪೆರ್ಲಂಪಾಡಿ

ಮಂಡೆಕೋಲು ಗ್ರಾಮ ಇರುವುದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ. ಕೇರಳದ ಗಡಿಗೆ ಹೊಂದಿಕೊಂಡಿರುವ ಗ್ರಾಮವಿದು. ಈ ಗ್ರಂಥಾಲಯ ಚಟುವಟಿಕೆಗಳಿಂದಲೇ ಹೆಸರುವಾಸಿಯಾಗಿದೆ ಈ ಊರು. ಈ ಗ್ರಂಥಾಲಯದ ಮೇಲ್ವಿಚಾರಕಿ ಸಾವಿತ್ರಿ ರಾಮ್ ಕಣೆಮರಡ್ಕ, ಗ್ರಂಥಾಲಯವನ್ನು ಮಕ್ಕಳ ಮನೆಯನ್ನಾಗಿಸಿದ್ದಾರೆ.

ಸಾವಿತ್ರಿ ಅವರ ಊರು ಸುಳ್ಯ ತಾಲ್ಲೂಕಿನ ದೇವಚಳ್ಳ. 2007ರಲ್ಲಿ ಅದೇ ಊರಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕಿಯಾಗಿ ಸೇವೆ ಆರಂಭಿಸಿದರು. ಜನಪ್ರತಿನಿಧಿಗಳು, ಅಧಿಕಾರಿಗಳ ಮನವೊಲಿಸಿ ಸ್ವಂತ ಕಟ್ಟಡ ನಿರ್ಮಾಣವಾಗುವಂತೆ ಮಾಡಿದರು. ಸುಳ್ಯ ತಾಲ್ಲೂಕಿನಲ್ಲಿ ಸ್ವಂತ ಕಟ್ಟಡ ಹೊಂದಿದ ಮೊದಲ ಗ್ರಾಮ ಪಂಚಾಯಿತಿ ಗ್ರಂಥಾಲಯ ಇದು ಎಂದು ಅವರು ಹೆಮ್ಮೆಯಿಂದ ಹೇಳುತ್ತಾರೆ. ವಿವಾಹದ ನಂತರ, ಪತಿ ಸೀತಾರಾಮ ಅವರ ಊರು ಮಂಡೆಕೋಲುಗೆ ವರ್ಗಾವಣೆ ಮಾಡಿಸಿಕೊಂಡರು. ಇಲ್ಲಿನ ಗ್ರಂಥಾಲಯದ ಚಿತ್ರಣ ಬದಲಿಸಲು ಪಣತೊಟ್ಟರು. ಮಕ್ಕಳನ್ನು ಗ್ರಂಥಾಲಯದತ್ತ ಸೆಳೆಯಲು 'ಅಮ್ಮನಿಗೊಂದು ಪುಸ್ತಕ' ಯೋಜನೆ ಆರಂಭಿಸಿದರು. ಮಗು ಗ್ರಂಥಾಲಯದಿಂದ ಪುಸ್ತಕ ಪಡೆದುಕೊಂಡು ಮನೆಯಲ್ಲಿ ತಾಯಿಗೆ ಕೊಟ್ಟು ಓದಿಸಬೇಕು. ತಾಯಿ